ಮಹಮ್ಮದ್ ಖದೀರ್ ಬಾಬು ತೆಲುಗು ಸಾಹಿತ್ಯ ಕ್ಷೇತ್ರದ ಜನಪ್ರಿಯ ಲೇಖಕ, ಪತ್ರಕರ್ತ. ಇವರ 'ದರ್ಗಾಮಿಟ್ಟ ಕಥಲು' ಮತ್ತು 'ಪೋಲೇರಮ್ಮಬಂಡ ಕಥಲು' ಸಂಕಲನಗಳು ಇತ್ತೀಚೆಗೆ ಇಂಗ್ಲಿಷ್‌ಗೆ ಅನುವಾದಗೊಂಡಿವೆ. 'ನ್ಯೂಬಾಂಬೆ ಟೈರ್ಸ್' ಕಥೆ ಬಹಳ ಪ್ರಸಿದ್ಧವಾಗಿದ್ದು, ಮಲಯಾಳಂಗೆ ಅನುವಾದಗೊಂಡಿದೆ. ಆ ಕಥೆಯನ್ನಾಧರಿಸಿದ ನಾಟಕವು ಕೇರಳ ಮತ್ತು ದುಬೈಯಲ್ಲಿ ಅನೇಕ ಪ್ರದರ್ಶನಗಳನ್ನು ಕಂಡಿದೆ.

ಬಿಡೋಣ. ನೀರಿನ ಡ್ರಮ್ಮುಗಳಲ್ಲಿ ಎರಡೆರಡು ಐಸ್ ಗಡ್ಡೆಗಳನ್ನು ಹಾಕ್ಸೀನಿ. ಆ ನೀರು ಕುಡಿದರೆ ಅರ್ಧ ಹಸಿವು ಸತ್ತು ಹೋಗುತ್ತದೆ. ನಮ್ಮ ಗಂಡಸರವರೆಗೆ 'ಫಿಕರ್' ಇಲ್ಲ ಬಾವಾ. ಈಗಿನ ಪಂಕ್ತಿಗೆ 'ಪೀಸು'ಗಳು ಖಾಲಿಯಾದರೂ ತಲೆಮಾಂಸ ಬಡಿಸಿಬಿಡೋಣ' ಎಂದು ಷರೀಫರಿಗೆ ಭರವಸೆ ನೀಡಿದ ಅಸ್ಲಾಂ. 'ನಮ್ಮ ಹೆಣ್ಮಕ್ಕಳನ್ನು ಏನ್ಮಾಡೋಣ ಕಣೋ' ಕೇಳಿದರು ಷರೀಫ್.

'ನೀವು ಬಿಡಿ ಬಾವಾ. ಗಂಡಸರು ಮಾದಚೋರ್‌ದ್‌ಗಳು... ಅವರರದೇನಿದೆ. ಸ್ಟೇಷನ್ ಬಳಿ ಮಸಾಲವಡೆಗಳು ಸಿಗುತ್ತವೆ. ತರಿಸ್ತೀನಿ. ತಿಂದು ನೀರು ಕುಡಿತಾರೆ. ಸಾಯಂಕಾಲ ಏನೋ ಒಂದು ಅಡುಗೆ ಮಾಡಿಕೊಳ್ಳಬಹುದು' ಎಂದು ಅಖಾಡಾಕ್ಕೆ ಇಳಿದ ಅಸ್ಲಾಂ. ಊಟದ ಜಾಗವೆಲ್ಲಾ ಮಸ್ತಾನಯ್ಯ ಉರುಸುವಿನ ಗಲಾಟೆಯಿಂದ ತುಂಬಿ ಹೋಗಿತ್ತು. 'ಮೊಸರು ಭಾಜಿ' 'ಗೊಂಗೂರ', 'ದಾಲ್ಚ', 'ಖಾನಾ ಲಾವ್' ತಿನ್ನುತ್ತಲೇ ಕೂಗಿ ಕರೆಯುತ್ತಿದ್ದರು. ಎಲ್ಲರೂ ಮುಖದ ಮೇಲಿನ ಬೆವರನ್ನು ಶರಟಿನಿಂದ ಒರೆಸಿಕೊಳ್ಳುತ್ತಿದ್ದರು.

ಅಸ್ಲಾಮನಿಗೆ ಪ್ರತಿ ಪಂಕ್ತಿಯೂ ಕತ್ತಿಯ ಮೇಲೆ ಸಾಮಿನಂತೆ ಇತ್ತು. ಅಷ್ಟೊತ್ತಿಗಾಗಲೇ ತನ್ನ ಮೆಕ್ಯಾನಿಕ್ ಅಂಗಡಿಯಲ್ಲಿ ಕೆಲಸ ಮಾಡುವ ಚುರುಕು ಹುಡುಗರನ್ನು ಅಡುಗೆ ಬಡಿಸಲು ಇಟ್ಟಿದ್ದ. ಆದರೂ ಯಾವ ಘಳಿಗೆಯಲ್ಲಿ ಯಾವ ಮಾತು ಬರುತ್ತದೆಯೋ ಎಂದು ಭಯವಾಗಿತ್ತು.

ಮದುಮಗನಾದರೆ ನಿಖಾ ಮುಗಿಯುತ್ತಿದ್ದಂತೆಯೇ 'ಮುಯ್ಯಿ'ಗೆ ಕೂಡಾ ತಲೆ ಕೆಡಿಸಿಕೊಳ್ಳದೇ ಪಂಕ್ತಿಯ ಬಳಿ ನಿಂತುಬಿಟ್ಟಿದ್ದ. ತನ್ನ ಸಂಬಂಧಿಕರ ಬಳಿ, ಸ್ನೇಹಿತರ ಬಳಿ ಪದೇಪದೇ ಹೋಗಿ ಏನೇನು ಬೇಕೆಂದು ವಿಚಾರಿಸುತ್ತಿದ್ದ.

'ಮಾಮ... ಒಳ್ಳೆ ಪೀಸುಗಳನ್ನು ಹುಡುಕಿ ನಮ್ಮೊರಿಗೆ ಹಾಕು' ಎಂದು ನಿಮಿಷಕ್ಕೊಮ್ಮೆ ಅಸ್ಲಾಮನಿಗೆ ಹೇಳುತ್ತಿದ್ದ.

'ಮುನೀರನ ಮದುವೆಯಲ್ಲಿ ಒಂದು ಅನ್ನದ ಅಗುಳು ಕೂಡಾ ಕಾಣಿಸ್ಲಿಲ್ಲ. ಎಲ್ಲಾ ಪೀಸ್‌ಗಳೇ' ಎಂದು ನಾಳೆ ಅಕ್ಕಸಾಲಿಗರ ಬೀದಿಯಲ್ಲಿ ಗೆಳೆಯರೆಲ್ಲಾ ಹೆಮ್ಮೆಯಿಂದ ಹೇಳಿಕೊಳ್ಳಬೇಕೆಂದು ಆಸೆ ಅವನಿಗೆ.

ಡಬರಿಗಳು ಕರಗುತ್ತಿವೆಯಾಗಲೀ ಒಬ್ಬರೂ ಎಲೆ ಮಡಚುತ್ತಿಲ್ಲ. ನೋಡಿ ನೋಡಿ ಸಾಕಾಯಿತು ಅಸ್ಲಾಮನಿಗೆ. ಇನ್ನು ಅಲ್ಲಿಯೇ ಇದ್ದರೆ ಮುಲಾಜಿಗೆ ಬಸಿರಾದಂಗಾಗುತ್ತದೆ ಎಂದು ಡೇಕ್ಸಾ ಹತ್ತಿರ ಹೋಗಿ ಹುಡುಗರಿಗೆ ಹೇಳಿದ.

'ಲೋ... ನಾನಿದ್ದರೆ ಅಲ್ಲಿ ಕೆಲಸ ಆಗೋ ಲಕ್ಷಣ ಕಾಣುತ್ತಿಲ್ಲ. ಎಲ್ಲಾ ನೀವೇ ನೋಡ್ಕೋಳಿ. ಮದುಮಗನ ಮಾತನ್ನು ಮಾತ್ರ ಕೇಳಬೇಡಿ. ಎಲೆಯಲ್ಲಿ ಅನ್ನ ಬಡಿಸಿದಾಗ ಒಂದು ನಾಲ್ಕು ತುಂಡುಗಳನ್ನು ಹಾಕಿ. ಆಮೇಲೆ ಯಾರೇ ಕೇಳಿದರೂ ಬರೀ ಅನ್ನ ಮಾತ್ರ ಹಾಕ್ರಿ. ಕೇಳಿದರೆ ತರ್ತಾ ಇದ್ದೀನಿ ಅಂತ ಹೇಳಿ. ನಮ್ಮ ಬಾವ ಮೂವತ್ತು ಸಾವಿರ ಖರ್ಚು ಮಾಡಿ ಪಲಾವ್ ಮಾಡ್ಸಿದ್ದು ಅವರ ಸಲುವಾಗಿ ಅಲ್ಲ. ನಮ್ಮ ಹುಡುಗ್ರು ಕೂಡಾ ತಿನ್ನಲು' ಎಂದು ಹಿತ್ತಲಿಗೆ ಹೋಗಿ ನಿಂತುಕೊಂಡ.

ಆ ಮನೆಯ ಆಚೆ ರೈಲು ಕಂಬಿಗಳು. ಅವುಗಳನ್ನು ದಾಟಿದರೆ ವಿಶಾಲವಾದ ಮೈದಾನ. ಸಿಗರೇಟ್ ತೆಗೆದು ಸುತ್ತಲೂ ಶರೀಫರನ್ನು ಗಮನಿಸಿ ಬೆಂಕಿ ಹಚ್ಚಿದ. ಬಾವನಾಗಿದ್ದರೂ ಶರೀಫರ ಎದುರು ಅವನು ಸಿಗರೇಟನ್ನು ಹಚ್ಚುವುದಿಲ್ಲ. ಎರಡು ಮೂರು ದಮ್ ಎಳೆದ ನಂತರ ಅವನ ಮನಸಿಗೆ ಕೊಂಚ ಸಮಾಧಾನವಾಯಿತು. ಈ ಮದುವೆ ಅಡಾವಿಡಿ,

